# ಎರಡೂ ಒಂದೇನಾ

ಹೀಗೇ ಒಂದು ದಿನ ಕೆಲಸ ಕಾರ್ಯಗಳ ಮಧ್ಯೆ
ನನ್ನ ಎಲ್.ಕೆ.ಜಿ. ಪುಟ್ಟಿಗೆ ಕಲಿಸ ಹೊರಟೆ ಒಂದು ಪದ್ಯ
ನಾಯಿಮರಿ ನಾಯಿಮರಿ ತಿಂಡಿ ಬೇಕೆ?
ಊಂಹೂಂ... ಹೇಳಲೊಪ್ಪಲಿಲ್ಲ ಮಗಳು
ಮಾಮ್... ಆ ಪದ್ಯ ಹೇಳೋದು ಹೀಗೆ
ನಾಯಿಮರಿ ನಾಯಿಮರಿ ಐಫೋನ್ ಬೇಕೆ?
ಐಫೋನ್ ಬೇಕು ಐಪ್ಯಾಡ್ ಬೇಕು ಎಲ್ಲ ಬೇಕು
ನಾಯಿಮರಿ ನಿನಗೆ ಐಪ್ಯಾಡ್ ಯಾಕೆ ಬೇಕು?
ಬರುವ ಜನರ ಫೋಟೊ ಅಪ್ಲೋಡ್ ಮಾಡಬೇಕು
ನಾಯಿ ಮರಿ ಕಳ್ಳ ಬಂದರೇನು ಮಾಡುವೆ?
ತಕ್ಷಣವೇ ಫೋಟೊ ತೆಗೆದು ಸಿಗ್ನಲ್ ನೀಡುವೆ
ಜಾಣಮರಿ ನಾನು ಹೋಗಿ ಫೋನು ತರುವೆನು
ಬಾ ನಿನ್ನ ಸ್ಮಾರ್ಟ್‌ಮನೆಯ ಕಾಯುತಿರುವೆನು
ಸಪ್ಪಗಾಯಿತು ನನ್ನ ಮುಖ
ಹಳೆಯ ಅಮ್ಮ ಹೊಸ ಮಾಮ್ ಆಗಲಾರದ ದುಃಖ
ಪುಟ್ಟ ಕೈಗಳಲ್ಲಿ ಕೊರಳು ಬಳಸಿದ ಮಗಳು, ಸಮಾಧಾನಿಸಿದಳು
ಅಮ್ಮಾ ಅಂದ್ರೂ ಮಾಮ್ ಅಂದ್ರೂ ಅದೇ. ಎರಡೂ ಒಂದೇ
ಎರಡೂ ಒಂದೇನಾ?

ಸ್ಮಾರ್ಟ್‌ನಾಯಿ ಪದ್ಯ ಹೇಳಿದ ಮಗಳು
ಹತ್ತಿದಳು ಕಾಲೇಜು ಮೆಟ್ಟಿಲು
ಬಳೆ, ಜುಮುಕಿ, ಲಂಗ ಬೇಡವೆಂದಳು
ಜೀನ್ಸು ಟಾಪು ತುಂಡುಗೂದಲಲ್ಲಿ ನಗೆ ಬೀರಿದಳು
ಓದು ಮುಗಿಸಿ ಕೆಲಸ ಹಿಡಿದಳು, ಮಾಡಿದಳು ನೈಟ್ ಶಿಫ್ಟು
ತಂದೇಬಿಟ್ಟಳು ಮೊದಲ ಸಂಬಳದ ಗಿಫ್ಟು
ಯಾರು? ಯಾರದು ಅವಳಿಗೆ ದಿನಾ ಕೊಡುವುದು ಲಿಫ್ಟು?
ಅಂದಳು, ಚಿಲ್ ಮಾಮ್, ಅವನು ನನ್ನ ಕಂಪ್ಯಾನಿಯನ್!
ಹೇಳು ಮಗಳೇ, ಮದುವೆಯಾಗುವೆಯಾ ಅವನ?
ನೋಡೋಣವೇ ಅವನ ಅಪ್ಪ ಅಮ್ಮನ್ನ?
ಮಾಮ್ ನಿಂದು ತುಂಬ ಓಲ್ಡ್ ಫ್ಯಾಷನ್ನು
ಮದುವೆ ಯಾಕಾಗಬೇಕು? ನಮ್ಮದು ಲಿವ್‌ಇನ್ನು
ಹಾಂ!?... ಲಿವ್‌ಇನ್ನೇ? ನಿನ್ನ ಬಾಳಬಟ್ಟೆಗೆ ಬೇಡವೇ ಮಗಳೇ